584(1058) ಶ್ರೀ ಪಾಟೀಲ್ ಡಿ.ಆರ್. (ಗದಗ್) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರಕಾರ ಸಹಕಾರಿ ಚಳುವಳಿಯ ಶತಮಾನೋತ್ಸವವನ್ನು ಆಚರಿಸಲು ಇಲ್ಲಿಯವರೆಗೆ ಕೈಗೊಂಡ ಕ್ರಮಗಳೇನು;

ಆ) ಯಾವಾಗ ಎಲ್ಲೆಲ್ಲಿ ಆಚರಿಸಲಾಗುವುದು;

ಇ) ಗದಗ ತಾಲ್ಲೂಕು ಕಣಗಿನಹಾಳ ಗ್ರಾಮದಲ್ಲಿ ರಾಷ್ಟ್ರದಲ್ಲಿಯೇ ಪ್ರಥಮ ಸಹಕಾರಿ ಸಂಸ್ಥೆ ಪ್ರಾರಂಭವಾಗಿದ್ದು. ಅದರ ಯೋಜನೆಗಾಗಿ ಈ ತಾಲ್ಲೂಕು ಹಾಗೂ ಕಣಗಿನಹಾಳ ಗ್ರಾಮದ ಸಂಪೂರ್ಣ ಅಭಿವೃದ್ಧಿಗಾಗಿ ಸರಕಾರ ಕ್ರಮ ಕೈಗೊಳ್ಳುವುದೇ;

ಈ) ಗದಗ ಬೆಟಗೇರಿ ನಗರ ಹಾಗೂ ಕಣಗಿನಹಾಳ ಗ್ರಾಮಗಳಲ್ಲಿ ಶತಮಾನೋತ್ಸವ ಸಮಾರಂಭ ಏರ್ಪಡಿಸಲಾಗುವುದೇ;

ಉ) ಈ ಪ್ರಮಾಣದಿಂದಾರೂ ಸಮಾಜದಲ್ಲಿರುವ ಎಲ್ಲಾ ಸಂಘದ ಸದಸ್ಯರಿಗೆ ಶೇ. 6 ಬಡ್ಡಿ ದರದಲ್ಲಿ ಸಹಕಾರಿ ಸಂಘಗಳ ಮುಖಾಂತರ ವಿತರಣೆಯಾಗುವ ಹಾಗೆ ಸಹಕಾರ ಕ್ರಮಗಳೇನು ಕೈಗೊಳ್ಳುವುದೇ;

ಊ) ಕನಿಷ್ಟ ಈಗಿರುವ ರೈತ ಸದಸ್ಯರ ಮೂರು ಪಟ್ಟು ರೈತರಿಗೆ ಬೆಳೆ ಸಾಲ ಸಹಕಾರ ಸಂಘಗಳ ಮುಖಾಂತರ ಸಿಗಲು ಮುಂದಿನ ಎರಡು ವರ್ಷಗಳಲ್ಲಿ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಸರ್ಕಾರವು ಸಹಕಾರ ಚಳುವಳಿಯ ಶತಮಾನ್ಯೋತ್ಸವ ವರ್ಷವನ್ನು ಆಚರಿಸಲು ಕರ್ನಾಟಕ ಸಹಕಾರ ಮಹಾಮಂಡಳದ ಮೂಲಕ ಇಲ್ಲಿಯವರೆಗೆ ಕೈಗೊಂಡ ಕ್ರಮಗಳ ವಿವರಗಳು ಕೆಳಕಂಡಂತಿವೆ.

1. ವಿಚಾರಗೋಷ್ಠಿಗಳು / ಉಪನ್ಯಾಸಮಾಲಿಕೆಗಳನ್ನು ಏರ್ಪಡಿಸಿದ ವಿವರಗಳು

	ವಿಷಯ	ಸ್ಥಳ	ದಿನಾಂಕ
1.	20ನೇ ಶತಮಾನದಲ್ಲಿ ಸಹಕಾರಿ ಚಳುವಳಿ ಎದುರಿಸಬೇಕಾದ ಸಮಸ್ಯೆಗಳು	ಬೆಂಗಳೂರು	25-3-04
2.	ಸಹಕಾರಿ ಪಿತಾಮಹಾ ಶ್ರೀ ಸಿದ್ಧನಗೌಡ ಸಣ್ಣರಾಮನಗೌಡ ಪಾಟೀಲ್ ಇವರ ಜ್ಞಾಪನಾರ್ಥಕವಾಗಿ ಪ್ರಾದೇಶಿಕ ಅಸಮಾನತೆ ನಿವಾರಣೆಯಲ್ಲಿ ಸಹಕಾರ ಸಂಘಗಳ ಪಾತ್ರ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು	ಬೆಂಗಳೂರು	29-3-04
3.	ಸಹಕಾರಿ ಡಾಂಬರೀಕರಣದ ಹೆಗಡೆ	ಶಿರಸಿ	10-7-2004

4. ಸಹಕಾರಿ ಧರೀಣರಾದ ರಾಯಚೂರು14–7–2004
ದಿ. ಎಂ. ವಿರೂಪಾಕ್ಷಪ್ಪ ಪಾಟೀಲ್ ಅವರ
ಜ್ಞಾಪಕಾರ್ಥವಾಗಿ ಸಹಕಾರ ಚಳುವಳಿಯ
ಸಾಧನೆ ವೈಫಲ್ಯಗಳು ಹಾಗೂ
ಪರಿಹಾರೋಪಾಯಗಳು" ಉಪನ್ಯಾಸನವನು
ಏರ್ಪಡಿಸಲಾಗಿತ್ತು

5. ಕಾರ್ಪೋರೇಟ್ ಗೌರ್ನೆನ್ಸ್ ಇವರ ಕೋ–
ಅಪರೇಟಿವ್ ಸೊಸೈಟಿ ಬೆಂಗಳೂರು 20–8–2004

ವಿಚಾರಗೋಷ್ಟಿ

II. ಸಮಾಲೋಚನೆ ಹಾಗೂ ಚಿಂತಾನಮಂಥನ ಕಾರ್ಯಕ್ರಮ

– ಮಹಿಳಾ ಸಹಕಾರ ಸಂಘಗಳ ಸದಸ್ಯರಿಗೆ
ಉದ್ಯಮಗಳನ್ನು ಪ್ರಾರಂಭಿಸುವ ಬಗ್ಗೆ ಬೆಂಗಳೂರು 9–9–2004
ಮಾಹಿತಿ ನೀಡಲು

– ಆಧಾಯೋತ್ಪನ್ನ ತರಬೇತಿ ಕಾರ್ಯಕ್ರಮವನ್ನು
ಆರ್ಥಿಕವಾಗಿ ಹಿಂದುಳಿದಿರುವ ಮಹಿಳಾ ಮೈಸೂರು 4–9–2004
ಸಹಕಾರ ಸಂಘಗಳ ಸದಸ್ಯರ ಆರ್ಥಿಕ
ಅಭಿವೃದ್ಧಿ ವೃದ್ಧಿಗೊಳ್ಳಲು–ಎಲ್ಲಾ ಜಿಲ್ಲಾ
ಕೇಂದ್ರ ಸ್ಥಾನದಲ್ಲಿ ಏರ್ಪಡಿಸಲು ನಿರ್ಧರಿಸಿ
ಈಗಾಗಲೇ 04 ಜಿಲ್ಲೆಗಳ ಕೇಂದ್ರಸ್ಥಾನದಲ್ಲಿ
ಆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಆ) ಶತಮಾನೋತ್ಸವ ವರ್ಷವನ್ನು ಆಚರಿಸುವ ಅಂಗವಾಗಿ ಕೆಳಕಂಡಂತೆ ಕಾರ್ಯಕ್ರಮಗಳನ್ನು ಆಚರಿಸಲಾಗುವುದು.

–ಆದಾಯೋತ್ಪನ್ನ ತರಬೇತಿ ಕಾರ್ಯಕ್ರಮವನ್ನು ಉಳಿದ 12 ಜಿಲ್ಲೆಗಳಲ್ಲಿ 2005ರ ಜನವರಿ ಮತ್ತು ಫೆಬ್ರವರಿ ಮಾಹೆಯಲ್ಲಿ ಏರ್ಪಡಿಸಲಾಗುತ್ತದೆ.

1. ಬೆಂಗಳೂರು ಮತ್ತು ಮೈಸೂರು ವಿಭಾಗಗಲ್ಲಿ ಹಿರಿಯ ಸಹಕಾರಿಗಳಾದ ದಿವಂಗತ ಬಿ.ಎಸ್. ರಂಗಪ್ಪ ತೀರ್ಥಹಲ್ಲಿ ಮತ್ತು ದಿವಂಗತ ಜಿ.ವಿ. ಶಂಕರೇಗೌಡರವರ ಜ್ಞಾಪಕಾರ್ಥವಾಗಿ ಉಪನ್ಯಾಸ ಮಾಲಿಕೆಗಳನ್ನು 2005ರ ಫೆಬ್ರವರಿ ಹಾಗೂ ಮಾರ್ಚ್ ಮಾಹೆಯಲ್ಲಿ ನಡೆಸಲಾಗುವುದು.

2. "ಸಹಕಾರ ಕ್ಷೇತ್ರದ ದೃಷ್ಟಿ 2020" ವಿಚಾರ ಸಂಕೀರಣವನ್ನು ಬೆಂಗಳೂರಿನಲ್ಲಿ ಫೆಬ್ರವರಿ 2005ರಲ್ಲಿ ಏರ್ಪಡಿಸಲಾಗುತ್ತದೆ.

3. "ಪ್ರಸ್ತುತ ಸಹಕಾರ ಕಾಯಿದೆ ಸಹಕಾರ ಚಳುವಳಿಗೆ ಪೂರೆತವಾಗಿದೆಯೇ" ಎನ್ನುವ ಚಿಂತನೆಯ ರಾಜ್ಯಮಟ್ಟದ ಕಾರ್ಯಕ್ರಮವನ್ನು ಗದಗ ಜಿಲ್ಲೆಯ ಕಣಗಿನಹಾಳ ಗ್ರಾಮದಲ್ಲಿ 2005ನೇ ಮೇ ಮಾಹೆಯಲ್ಲಿ ಏರ್ಪಡಿಸಲಾಗುವುದು.

ಸಮಕಾಲೀನ ಶ್ರೇಷ್ಠ ಸಹಕಾರಿಗಳ ಬಗ್ಗೆ 000 ಪುಸ್ತಕಗಳನ್ನು ಹಾಗೂ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಕನಿಷ್ಟ 50 ಸಹಕಾರ ಸಂಘಗಳ ಬಗ್ಗೆ ಲೇಖನಗಳನ್ನು 2005ನೇ ಸಾಲಿನಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಹೌದು. ಕಣಗಿನಹಾಳ ಗ್ರಾಮವನ್ನು ದತ್ತು ಪಡೆದು ಇದನ್ನು ಮಾದರಿ ಗ್ರಾಮವಾಗಿ ಅಭಿವೃದ್ಧಿಪಡಿಸಲು ತೀರ್ಮಾನಿಸಲಾಗಿದೆ. ಜೊತೆಗೆ ದಿವಂಗತ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲರು ಸಹಕಾರ ಕ್ಷೇತ್ರಕ್ಕೆ ಸಲ್ಲಿಸಿದ ಅನುಪಮ ಸೇವೆಗಾಗಿ ಇವರ ಪುತ್ಥಳಿಯನ್ನು ಅನಾವರಣಗೊಳಿಸಲಾಗುವುದು. ಶ್ರೇಷ್ಠ ಸಹಕಾರಿಗಳಾದ ದಿವಂಗತ ಕೆ.ಹೆಚ್. ಪಾಟೀಲ್‌ರವರ ಹೆಸರಿನಲ್ಲಿ ಧಾರವಾಡದಲ್ಲಿ ಒಂದು ಸಹಕಾರ ತರಬೇತಿ ಕಾಲೇಜನ್ನು ಪ್ರಾರಂಭಿಸಲು ಪ್ರಸ್ತಾಪಿಸಲಾಗಿದೆ.

ಈ) ಹೌದು.

ಉ) ಸರಕಾರವು ರಾಜ್ಯದ ರೈತರಿಗೆ ಕೃಷಿ ಪತ್ತಿನ ಸಂಸ್ಥೆಗಳು ಶೇ. 6ರ ಬಡ್ಡಿ ದರದಲ್ಲಿ ಅಲ್ಪ ಕಾಲಾವಧಿ ಮಧ್ಯಮಾವಧಿ ಮತ್ತು ದೀರ್ಘಾವಧಿಸಾಲ ನೀಡುವ ಬಗ್ಗೆ ದಿನಾಂಕ 10–12–2004ರಂದು ಆದೇಶ ಹೊರಡಿಸಿದೆ. ಈ ಯೋಜನೆಯನ್ನು ಈಗಾಗಲೇ ಕಾರ್ಯಗತಗೊಳಿಸಲಾಗಿದೆ. ಈ ಯೋಜನೆಗೆ ಸರಕಾರವು 2004–05ನೇ ಸಾಲಿಗೆ ರೂ. 60.00 ಕೋಟಿ ಅವಕಾಶ ಮಾಡಿದ್ದ ಈಗಾಗಲೇ ರೂ. 15.00 ಕೋಟಿ ಮಂಜೂರು ಮಾಡಿರುತ್ತದೆ.

ಊ) ನಬಾರ್ಡ್ ಆರ್.ಬಿ.ಐ. ಸಂಸ್ಥೆಗಳು ಸಾಲ ನೀಡುವಿಕೆಯಲ್ಲಿ ಅನುಸರಿಸುವ ಮಾನದಂಡ ಹಾಗೂ ಮಾದರಿಯಂತೆ ಅವಶ್ಯಕ ಪ್ರಯತ್ನ ಮಾಡಲಾಗುವುದು.

585(1072) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಯಾವ ಯಾವ ತೋಟಗಾರಿಕೆ ಬೆಳೆಗಳನ್ನು ಗುರುತಿಸಿ, ಪ್ರೋತ್ಸಾಹಿಸಲಾಗಿದೆ;

ಆ) ತೋಟದ ಬೆಳೆಗಳ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡ ಕ್ರಮಗಳೇನು;

ಇ) ತೋಟಗಾರಿಕೆ ಬೆಳೆಗಳಿಗೆ ವಿಮೆ ಸೌಲಭ್ಯವನ್ನು ವಿಸ್ತರಿಸಲಾಗಿದೆಯೇ?

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕೆ ಸಚಿವರು)

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಭೂ–ಹವಾಮಾನಕ್ಕನು ಗುಣವಾಗಿ ಬೆಳೆಯತಕ್ಕಂತಹ ಎಲ್ಲಾ ವಿವಿಧ ತೋಟಗಾರಿಕೆ ಬೆಳೆಗಳನ್ನು ಅಂದರೆ ಅಡಿಕೆ,